**ಸಿ.ಸಿ.ನಂ.** 75/2025

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 2**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ. 75/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಚರಣ |
| ತಂದೆಯ ಹೆಸರು | : | ಬಾಬು ನಾಯ್ಕ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ್ತವ್ಯ | : | ಚಿತ್ರಗಿ, ಕುಮಟಾ |

(ಇಂದು ದಿನಾಂಕಃ 15-07-**2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ.7ರವರ ಪರಿಚಯ ಇದೆ. ಮೃತ ಜೀವನ ಮೇಸ್ತ ಇವರ ಪರಿಚಯ ಇಲ್ಲ. ಸುಮಾರು 2 ವರ್ಷಗಳ ಹಿಂದೆ ನನ್ನ ಸ್ನೇಹಿತನು ನನ್ನನ್ನು ಸರ್ಕಾರಿ ಆಸ್ಪತ್ರೆಯ ಬಳಿ ಹೋಗಲು ತಿಳಿಸಿದ್ದು ನಾನು ಅಲ್ಲಿ ಹೋಗಿರುತ್ತೇನೆ. ಸದರಿ ಸಂದರ್ಭದಲ್ಲಿ ಪೊಲೀಸರು ನನ್ನ ಬಳಿ ಕೆಲವೊಂದು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿದ್ದು ನಾನು ಸದರಿ ದಾಖಲಾತಿಗಳಿಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನ್ನ. ನಾನು ಆಸ್ಪತೆ?್ರ ಹೋಗುವ ಸಂದರ್ಭದಲ್ಲಿ ಜೀವನ ಮೇಸ್ತ ಇವರಿಗೆ ಗಾಯವಾಗಿರುತ್ತದೆ. ಸದರಿಗಾಯವು ಹೇಗೆ ಮತ್ತು ಯಾರ ತಪ್ಪಿನಿಂದ ಯಾಗಿದೆ

**ಸಿ.ಸಿ.ನಂ.** 75/2025

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 2**

ಎಂದು ನನಗೆ ಮಾಹಿತಿ ಇಲ್ಲ. ನಾನು ಅಪಘತವನ್ನು ನೋಡಿರುವುದಿಲ್ಲ ಈ ಅಪಘಾತ ಹೇಗೆ ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲತಿಯು ದೂರಾಗಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ನಿಪಿ.9ರಲ್ಲಿ ಬರೆದ ವಿಚಾರದ ಕುರಿಡಿತಾಗಿ ನನಗೆ ಮಾಹಿತಿ ಇರುವುದಿಲ್ಲ.

ಸಾಕ್ಷಿಗೆ ನಿಪಿ.1,2 ಹಾಗೂ 4ರ ಸಹಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಗದಿುರುತಿಸಿದ್ದು ಅವುಗಳನ್ನು ನಿಪಿ.1( ಬಿ),2(ಬಿ) ಹಾಗೂ 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ.3ರಿಂದ 8ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಭಾಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಷದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ ದಿಃ**

ದಿಃ 26-09-2024 ರಯಿ ಮಧ್ಯಾಹ್ನ ನಾನು ಹಾಗೂ ಚಾಸಾ.7ರವರು ಇಬ್ಬರು ಸೇರಿ ಅಂಕೋಲಾಕ್ಕೆ ನಮ್ಮ ಮೋಟಾರ ಸೈಕಲ ನಲ್ಲಿ ಹೊರಟಿದ್ದು ಸದರಿ ಸಂದರ್ಭದಲ್ಲಿ ನಾವು ರಾ.ಹೆ.

**ಸಿ.ಸಿ.ನಂ.** 75/2025

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 2**

ಮೇಲೆ ನಾಗೂರು ಕ್ರಾಸ ತಲುಪಿದಾಗ ರಾ.ಹೆ.-66ರ ಮೇಲೆ ಆರೋಪಿತನು ತನ್ನ ಕಾರ ಸಂಖ್ಯೆ ಟಿ.ಎಸ್-15-ಎಫ-ಹೆಚ್-7194ನೇದ್ದನುನ ಅಂಕೋಲಾ ಕಡೆಯಿಂದ ಕುಮಟಾ ಕಡೆಗೆ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದನು ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಆತನು ತನ್ನ ಕಾರನು ಒಮ್ಮೆಲೆ ರಸ್ತೆಯ ಬಲಕ್ಕೆ ಚಲಾಯಿಸಿ ಅದೇ ಸಂದರ್ಭದಲ್ಲಿ ಎದುರಿನಿಂದ ಅಂದರೆ ಕುಮಟಾ ಕಡೆಯಿಂದ ಅಂಕೋಲಾ ಕಡೆನಿಗೆ ಮೊಟಾರ ಸೈಕಲ ನಂ.ಜಿ.ಎ-03-ಎ.ಎಕ್ಸ -9642 ನೇದನ್ನು ಚಲಾಯಿಸಿಕೊಂಡು ಹೋಗುತ್ತಿದ್ದ ಮೃತ ವ್ಯಕ್ತಿಗೆ ಎದುರಿನಿಂದ ಡಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ, ನಂತರ ನಾವು ಅವರಿಗೆ ಗಭಿರ ಗಾಯವನ್ನು ಉಂಟು ಮಾಡಿ ಅವರನ್ನು ಚಿಕಿತ್ಸೆಗೆ ಕುಮಟಾ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆತನಿಗೆ ಹೆಚ್ಚಿನ ಚಿಕಿತ್ಸೆಗಾಗಿ ಗೋವಾದ ಬಾಂಬೊಲಿಯಂ ಆಸಪತ್ರೆಗೆ ಕಳುಹಿಸಿಕೊಟ್ಟಿದ್ದು ಅಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ದಿಃ 02-10-2024 ರಂದು ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ತನ್ನ ವಾಹನಮ್ನು ಅತೀ ವೇಗ ಹಾಗೂ ಅಅಜಾಗರೂಕತೆಯಿಂದ ಚಲಾಯಿಸಿ ಚಾಸಾ.6ರವರಿಗೆ ಗಹಾಯವನ್ನು ಉಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ನಾನು ನಿಪಿ.9ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9ರಂತೆ ದೂರನ್ನು ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ದಿಃ 28-09-2024 ರಂದು ನಾನು ತೊರೀಸಿದಂತೆ ಚಾಸಾ.2 ಹಾಗೂ 3ರವರ ಸಮ್ಮಮೆ ದಲಿ 16-00 ರಿಂದ 17 ಗಂಟೆಯಿುವರೆಗೆ ನಿಪಿ.1ರಂತೆ ಪಂಚನಾಮೆಯನ್ನು ನಿಪಿ.2ರಂತೆ ಕಚ್ಚಾ

**ಸಿ.ಸಿ.ನಂ.** 75/2025

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 2**

ನಕಾಶತೆಯನ್ನು ತಯಾರಿ ನಿಪಿ.3ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1ರ ಸಂ್ಧರ್ಭದಲ್ಲಿ ನಾನು ಹಾಜರಿದ್ದರೂ ಕೂಡ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ನಿಪಿ.4ರಂತೆ ಅಪಘಾತಕ್ಕೆ ಒಳಗಾದ ಹಾಗೂ ಅಪಘಾತಪಡಿಸಿದ ವಾಹನಗಳನ್ನು ನನ್ನ ಹಾಗೂ ಚಾಸಾ.3ರವರ ಸಮಕ್ಷಮ 17.30 ರಿಂದ 18.00 ವರೆಗೆ ಪಂಚನಾಮೆಯನ್ನು ಮಾಡಿ ನಿಪಿ.5 ರಿಂದ 8ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಕುರಿತಾಗಿ ನನಗೆ ಎಲ್ಲ ಮಾಹಿತಿ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಶ್ರೀ ಎಂ.ಡಿ.ಆರ್.. ವಕೀಲರಿಂದ**

ಪೊಲೀಸರು ನನ್ನ ಎಲ್ಲ ಸಹಿಗಳನ್ನು ಖಾಲಿ ಹಾಳೆಗೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾದಂ. ಕುಮಟಾ